# ಆರಾಧನೆಯ 5 ಆಧಾರಸ್ಥಂಭಗಳು

ಮುಸ್ಲಿಮನ ಜೀವನದ ಅಡಿಪಾಯ

## 1. ವಿಶ್ವಾಸ ಘೋಷಣೆ

ವಿಶ್ವಾಸ ಘೋಷಣೆ ಎಂದರೆ ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ ಮತ್ತು ಮುಹಮ್ಮದ್(ಸ)ರು ಅವನ ಸಂದೇಶವಾಹಕರಾಗಿದ್ದಾರೆ ಎಂದು ಸಾಕ್ಷ್ಯ ವಹಿಸುವುದು. ಹೃದಯದಲ್ಲಿ ಪ್ರಾಮಾಣಿಕವಾಗಿ ಮತ್ತು ದೃಢವಾಗಿ ವಿಶ್ವಾಸವಿಟ್ಟು ಇದನ್ನು ಮೌಖಿಕವಾಗಿ ಉಚ್ಚರಿಸಬೇಕು ಮತ್ತು ಕರ್ಮವು ಇದನ್ನು ಹಿಂಬಾಲಿಸಬೇಕು. ಈ ಘೋಷಣೆಯ ಮೂಲಕ ಒಬ್ಬ ವ್ಯಕ್ತಿ ಮಿಥ್ಯಾರಾಧ್ಯರನ್ನೆಲ್ಲ ನಿಷೇಧಿಸುತ್ತಾನೆ ಮತ್ತು ಆರಾಧನೆಗೆ ಅರ್ಹನಾಗಿರುವುದು ಅಲ್ಲಾಹು ಮಾತ್ರ ಎಂಬುದನ್ನು ದೃಢೀಕರಿಸುತ್ತಾನೆ ಹಾಗೂ ಅವನ ಸಂದೇಶವಾಹಕರನ್ನು ಅಂಗೀಕರಿಸುತ್ತಾನೆ. ತನ್ಮೂಲಕ ಅವನು ಮುಸಲ್ಮಾನನಾಗುತ್ತಾನೆ.

## 2. ಐದು ಹೊತ್ತಿನ ನಮಾಝ್

ಐದು ಹೊತ್ತಿನ ನಮಾಝ್ ಇಸ್ಲಾಮಿನ ಎರಡನೆ ಸ್ಥಂಭವಾಗಿದೆ. ನಮಾಝ್ ಮನುಷ್ಯನ ಹಾಗೂ ಅವನ ಸೃಷ್ಟಿಕರ್ತನ ಮಧ್ಯೆ ವೈಯುಕ್ತಿಕ ಮತ್ತು ಆಧ್ಯಾತ್ಮಿಕ ಸಂಬಂಧವನ್ನು ಸ್ಥಾಪಿಸುತ್ತದೆ. ಅದು ದೇವನಿಗೆ ಶರಣಾಗಬೇಕೆಂಬ ಮನುಷ್ಯನ ಕರ್ತವ್ಯವನ್ನು ನಿರಂತರ ಜ್ಞಾಪಿಸುವ ಕ್ರಿಯೆಯಾಗಿದೆ. ಇದನ್ನು ಪ್ರಭಾತದಲ್ಲಿ, ಮಧ್ಯಾಹ್ನದಲ್ಲಿ, ಮಧ್ಯಾಹ್ನಾನಂತರ, ಸೂರ್ಯಾಸ್ತದಲ್ಲಿ ಮತ್ತು ರಾತ್ರಿಯಲ್ಲಿ ಒಂದೊಂದು ಬಾರಿ ನಿರ್ವಹಿಸಬೇಕಾಗಿದೆ. ಪ್ರತಿಯೊಂದು ನಮಾಝನ್ನು ನಿರ್ವಹಿಸಲು ಕೆಲವು ನಿಮಿಷಗಳು ಸಾಕು. ಅದು ಕುರ್‌ಆನ್ ಪಾರಾಯಣ, ಪ್ರಾರ್ಥನೆ, ಅಲ್ಲಾಹನ ಸ್ತುತಿ ಮತ್ತು ಕೆಲವು ದೈಹಿಕ ಭಂಗಿಗಳನ್ನು ಒಳಗೊಂಡಿದೆ. ನಮಾಝ್‌ಗೆ ತಯಾರಿಯಾಗಿ ಮುಸ್ಲಿಮರು ಮುಖ ಕೈ ಮೊದಲಾದ ಕೆಲವು ಅಂಗಗಳನ್ನು ತೊಳೆಯಬೇಕಾಗಿದೆ. ಇದು ಆಧ್ಯಾತ್ಮಿಕ ಮತ್ತು ದೈಹಿಕ ಶುಚಿತ್ವವನ್ನು ಖಾತ್ರಿಪಡಿಸುವುದಕ್ಕಾಗಿದೆ.

## 3. ವಾರ್ಷಿಕ ಕಡ್ಡಾಯದಾನ

ಕೆಲವು ನಿರ್ದಿಷ್ಟ ಮಿತಿಗಳನ್ನು (ಉದಾ: ಒಂದು ನಿರ್ದಿಷ್ಟ ಮಿತಿಗಿಂತ ಹೆಚ್ಚು ಧನವನ್ನು ಹೊಂದಿರುವುದು) ತಲುಪುವ ಪ್ರತಿಯೊಬ್ಬ ಮುಸ್ಲಿಮನ ಮೇಲೂ ವಾರ್ಷಿಕ ದಾನವು ಕಡ್ಡಾಯವಾಗಿದೆ. ಒಬ್ಬ ವ್ಯಕ್ತಿಯ ಸಂಪತ್ತಿನಲ್ಲಿ 2.5%ವನ್ನು ವಾರ್ಷಿಕವಾಗಿ ಬಡವರು, ನಿರ್ಗತಿಕರು, ಪ್ರಯಾಣಿಕರು ಮೊದಲಾದ ಅರ್ಹರಿಗೆ ದಾನ ಮಾಡಬೇಕಾಗಿದೆ. ಅದು ಅವನ ಸಂಪತ್ತನ್ನು ಶುದ್ಧೀಕರಿಸುತ್ತದೆ ಮತ್ತು ಕೊಡುವವನಿಗೂ ಪಡೆಯುವವನಿಗೂ ಅನೇಕ ಪ್ರಯೋಜನಗಳನ್ನು ನೀಡುತ್ತದೆ. ಅದರ ಒಂದು ಪ್ರಯೋಜನವೇನೆಂದರೆ ಅದು ಬಡವ ಮತ್ತು ಬಲ್ಲಿದರ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ. ಪ್ರತಿಯೊಬ್ಬರಿಗೂ ಅವರ ಮೂಲಭೂತ ಅಗತ್ಯಗಳು ಪೂರೈಕೆಯಾಗುವುದನ್ನು ಖಾತ್ರಿಪಡಿಸುತ್ತದೆ.

## 4. ವಾರ್ಷಿಕ ಉಪವಾಸ

ರಮದಾನ್ ಇಸ್ಲಾಮೀ ಕ್ಯಾಲೆಂಡರ್‌ನ 9ನೇ ತಿಂಗಳಾಗಿದೆ.

ಪ್ರತಿವರ್ಷ ರಮದಾನ್ ತಿಂಗಳಲ್ಲಿ ಮುಸ್ಲಿಮರು ಪ್ರಭಾತದಿಂದ ಸೂರ್ಯಾಸ್ತದ ತನಕ ಅನ್ನ, ಪಾನೀಯ ಮತ್ತು ಲೈಂಗಿಕ ಸಂಪರ್ಕದಿಂದ ದೂರವುಳಿದು ಉಪವಾಸ ಆಚರಿಸುತ್ತಾರೆ. ಇದೊಂದು ಆಧ್ಯಾತ್ಮಿಕ ಶುದ್ಧೀಕರಣವಾಗಿದೆ, ತಾಳ್ಮೆ ಮತ್ತು ಆತ್ಮನಿಗ್ರಹವನ್ನು ಬೆಳೆಸುತ್ತದೆ ಹಾಗೂ ಅನೇಕ ದೈಹಿಕ ಪ್ರಯೋಜನಗಳನ್ನು ನೀಡುತ್ತದೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಸ್ವಸ್ಥನಾಗಿರುವ ಎಲ್ಲ ಪ್ರೌಢ ಮುಸ್ಲಿಮರ ಮೇಲೂ ಇದು ಕಡ್ಡಾಯವಾಗಿದೆ. ಮಕ್ಕಳಿಗೆ, ರೋಗಿಗಳಿಗೆ, ಮಾನಸಿಕ ಅಸ್ವಸ್ಥರಿಗೆ, ವೃದ್ಧರಿಗೆ, ಋತುಸ್ರಾವವಿರುವ ಮಹಿಳೆಯರಿಗೆ ಮತ್ತು ಪ್ರಯಾಣಿಕರಿಗೆ ವಿನಾಯಿತಿಯಿದೆ. ಉಪವಾಸವು ಗರ್ಭಿಣಿಯರಿಗೆ ಹಾಗೂ ಸ್ತನಪಾನ ಮಾಡುವ ಸ್ತ್ರೀಯರಿಗೆ ಅಥವಾ ಅವರ ಶಿಶುಗಳಿಗೆ ಹಾನಿಯನ್ನುಂಟು ಮಾಡುವುದಾದರೆ ಅವರಿಗೂ ವಿನಾಯಿತಿಯಿದೆ.

## 5. ತೀರ್ಥಯಾತ್ರೆ

ಎಲ್ಲ ಯಾತ್ರಾರ್ಥಿಗಳೂ ಸರಳವಾದ ಮತ್ತು ಸಮಾನವಾದ ವಸ್ತ್ರವನ್ನು ತೊಡುತ್ತಾರೆ. ಇದು ವರ್ಗ, ನಾಗರಿಕತೆಗಳ ಬೇಧವನ್ನು ಅಳಿಸಿ ದೇವನ ಮುಂದೆ ಎಲ್ಲರೂ ಸಮಾನರು ಎಂಬುದನ್ನು ಘೋಷಿಸುತ್ತದೆ

ಒಬ್ಬ ವ್ಯಕ್ತಿಗೆ ದೈಹಿಕ ಮತ್ತು ಆರ್ಥಿಕ ಸಾಮರ್ಥ್ಯವಿದ್ದರೆ ಬದುಕಿನಲ್ಲೊಂದು ಬಾರಿ ಸೌದಿ ಅರೇಬಿಯಾದಲ್ಲಿರುವ ಮಕ್ಕಾಗೆ ತೀರ್ಥಯಾತ್ರೆ ನಿರ್ವಹಿಸಬೇಕಾಗಿದೆ. ಅದು ಪ್ರತಿವರ್ಷ ಇಸ್ಲಾಮೀ ಕ್ಯಾಲೆಂಡರ್‌ನ 12ನೇ ತಿಂಗಳಲ್ಲಿ ಜರುಗುತ್ತದೆ. ವರ್ಣ, ದೇಶ, ಸ್ಥಾನ, ಪ್ರಾಯ ಇತ್ಯಾದಿ ಬೇಧವಿಲ್ಲದೆ ಜನರು ಒಟ್ಟಾಗಿ ಏಕೈಕ ಸತ್ಯದೇವನ ಆರಾಧನೆ ಮಾಡುತ್ತಾರೆ. ಈ ಮಹಾ ಯಾತ್ರೆಯು ತ್ಯಾಗ, ಪರಿಶ್ರಮ ಮೊದಲಾದ ಅಂಶಗಳನ್ನು ಹೊಂದಿದೆ. ಇಂತಹ ಒಂದು ಅನುಭವವು ಮನುಷ್ಯನ ಬದುಕನ್ನು ಪರಿವರ್ತಿಸುತ್ತದೆ, ಅವನನ್ನು ವಿನಯವಂತನನ್ನಾಗಿಸುತ್ತದೆ ಮತ್ತು ಹೆಚ್ಚು ತಾಳ್ಮೆ ವಹಿಸುವಂತೆ ಹಾಗೂ ಕೃತಜ್ಞತೆ ಸಲ್ಲಿಸುವಂತೆ ಪ್ರೇರೇಪಿಸುತ್ತದೆ.

# ಆರಾಧನೆಯ ಪರಿಕಲ್ಪನೆ

ಇಸ್ಲಾಮಿನಲ್ಲಿ ಆರಾಧನೆ ಎಂಬ ಪರಿಕಲ್ಪನೆ ಈ ಮೇಲಿನ ಕಟ್ಟುಪಾಡುಗಳಿಗೆ ಸೀಮಿತವಲ್ಲ. ಆರಾಧನೆಯೆಂದರೆ ಅದು ಅಲ್ಲಾಹನನ್ನು ಸಂತೃಪ್ತಗೊಳಿಸುವ ಎಲ್ಲ ಕರ್ಮಗಳನ್ನೂ ಒಳಗೊಂಡಿದೆ. ಉದ್ದೇಶವು ನಿಷ್ಕಳಂಕವಾಗಿದ್ದರೆ ಮತ್ತು ಅಲ್ಲಾಹನ ಆದೇಶಗಳಿಗೆ ಬದ್ಧವಾಗಿರುವುದಾದರೆ ಸರ್ವ ದೈನಂದಿನ ಕರ್ಮಗಳೂ ಆರಾಧನೆಗಳಾಗಿವೆ. ಉದಾ: ಮುಗುಳ್ನಗುವುದು, ನೆರೆಹೊರೆಯವರೊಂದಿಗೆ ಉತ್ತಮವಾಗಿ ವರ್ತಿಸುವುದು, ಕುಟುಂಬಕ್ಕೆ ಆಧಾರವಾಗಿ ನಿಲ್ಲುವುದು, ಪ್ರಾಮಾಣಿಕತೆ ತೋರಿಸುವುದು, ದಾರಿಯಿಂದ ಕಲ್ಮಶಗಳನ್ನು ತೊಲಗಿಸುವುದು ಇತ್ಯಾದಿ. ಅಲ್ಲಾಹನಿಗೆ ನಮ್ಮ ಆರಾಧನೆಗಳ ಅಗತ್ಯವಿಲ್ಲ, ಆದರೆ ನಮಗೆ ಅವನ ಅಗತ್ಯವಿದೆ ಮತ್ತು ನಮ್ಮ ಆರಾಧನೆಗಳು ನಮ್ಮದೇ ಪ್ರಯೋಜನಕ್ಕಾಗಿವೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

# ಸಮಾಪ್ತಿ

ಮೇಲೆ ವಿವರಿಸಲಾದ ವಿಶ್ವಾಸದ ಮತ್ತು ಆರಾಧನೆಯ ಆಧಾರಸ್ಥಂಭಗಳು ಇಸ್ಲಾಮಿನ ಅಂತಃಸತ್ವಗಳಾಗಿವೆ. ಇವುಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ, ಮನುಷ್ಯರೆಲ್ಲರ ಆಧ್ಯಾತ್ಮಿಕ, ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಅಗತ್ಯಗಳೆಲ್ಲವನ್ನೂ ಇಸ್ಲಾಮ್ ನೆರವೇರಿಸಿಕೊಡುತ್ತದೆ. ಇದು ಪ್ರಾಯೋಗಿಕವಾದ ಮತ್ತು ವೈಚಾರಿಕವಾದ ಜೀವನ ಪದ್ಧತಿಯಾಗಿದೆ. ಅಷ್ಟೇ ಅಲ್ಲದೆ, ಇದು ಸರ್ವಶಕ್ತನಾದ ದೇವನು ಅಂಗೀಕರಿಸಿದ ಏಕೈಕ ಜೀವನಪದ್ಧತಿಯೂ, ಸ್ವರ್ಗದೆಡೆಗಿರುವ ಏಕೈಕ ದಾರಿಯೂ ಆಗಿದೆ.

**More Information:**

**IslamHouse.com**

http://www.islamhouse.com

Translation: Muhammad Hamza Puttur

Source: http://www.islamicpamphlets.com

مقدمة مختصرة عن الإسلام

# ಇಸ್ಲಾಮ್‌ನ ಬಗ್ಗೆ

A BRIEF INTRODUCTION ABOUT ISLAM

## ಒಂದು ಸಂಕ್ಷಿಪ್ತ ಪರಿಚಯ



learn the basics

Publishers

IslamHouse.com

# ಇಸ್ಲಾಮ್‌ನ ಬಗ್ಗೆ

ಮುಸ್ಲಿಮರು ಜಗತ್ತಿನ ಐದನೇ ಒಂದರಷ್ಟು ಜನಸಂಖ್ಯೆಯನ್ನು ಹೊಂದಿದ್ದು ಇಸ್ಲಾಮ್ ಜಗತ್ತಿನ ಪ್ರಮುಖ ಧರ್ಮಗಳ ಪೈಕಿ ಒಂದಾಗಿದೆ. ಏಕಮೇವ ನೈಜ ದೇವನಲ್ಲಿರುವ (ಅಲ್ಲಾಹನಲ್ಲಿರುವ) ವಿಶ್ವಾಸ ಮತ್ತು ಆರಾಧನೆಯು ಬದುಕಿನ ಉದ್ದೇಶವೂ ಇಸ್ಲಾಮಿನ ಅಡಿಪಾಯವೂ ಆಗಿದೆ.

'ಇಸ್ಲಾಮ್' ಎಂಬ ಅರಬಿ ಪದದ ಭಾಷಿಕ ಅರ್ಥವು ಒಬ್ಬನೇ ಸತ್ಯದೇವನಿಗಿರುವ (ಅಲ್ಲಾಹನಿಗಿರುವ) 'ಶರಣಾಗತಿ'ಯಾಗಿದೆ. ದೇವನು ಅಂಗೀಕರಿಸಿದ ಏಕೈಕ ಧರ್ಮವಾದ ಇಸ್ಲಾಮಿನ ಮೂಲಕ ಮಾತ್ರ ಇಹಲೋಕದಲ್ಲೂ ಪರಲೋಕದಲ್ಲೂ ಯಶಸ್ಸನ್ನು ಪಡೆಯಲು ಸಾಧ್ಯ. ಇತರೆಲ್ಲ ಧರ್ಮಗಳಂತೆ ಇಸ್ಲಾಮ್ ಎಂಬುದು ಯಾರಾದರೂ ವ್ಯಕ್ತಿಯ ಹೆಸರಿನೊಂದಿಗೆ ಥಳಕು ಹಾಕಿಕೊಂಡಿರುವ ಧರ್ಮವಲ್ಲ. ಯಾರು ಸ್ವಯಂಪ್ರೇರಿತನಾಗಿ ತನ್ನ ಇಚ್ಛೆಯನ್ನು ದೇವನಿಗೆ ಶರಣಾಗಿಸುತ್ತಾನೋ ಅವನನ್ನು ಮುಸ್ಲಿಮ್ ಎನ್ನಲಾಗುತ್ತದೆ. ಅವನು ಯಾವುದೇ ಕುಲ ಅಥವಾ ಜಾತಿಯಲ್ಲಿ ಸೇರಿದವನಾಗಿದ್ದರೂ ಸಹ.

ಇಸ್ಲಾಮಿನ ಸಂಪೂರ್ಣ ಜೀವನ ಪದ್ಧತಿ, ಎಲ್ಲ ಜನಾಂಗಗಳನ್ನೂ, ರಾಷ್ಟ್ರಗಳನ್ನೂ ಆವರಿಸಿಕೊಳ್ಳುವ ಇಸ್ಲಾಮೀ ಭ್ರಾತೃತ್ವ, ಇಸ್ಲಾಮಿನಲ್ಲಿ ಕುಟುಂಬ ಮತ್ತು ಸಮಾಜಕ್ಕಿರುವ ಪ್ರಾಮುಖ್ಯತೆ, ಇಸ್ಲಾಮೀ ಸಂದೇಶದ ಸಾರ್ವತ್ರಿಕತೆ ಮತ್ತು ಸಾರ್ವಕಾಲಿಕತೆ ಇತ್ಯಾದಿಗಳನ್ನೊಳಗೊಂಡಂತೆ ಇಸ್ಲಾಮಿನ ಬಗ್ಗೆ ಒಂದು ಪೂರ್ಣ ಪರಿಚಯ ನೀಡುವುದು ಇಂತಹ ಒಂದು ಕಿರು ಕರಪತ್ರದಲ್ಲಿ ಅಸಾಧ್ಯವಾಗಿದೆ. ಆದ್ದರಿಂದ ನಾವಿಲ್ಲಿ ವಿಶ್ವಾಸದ ಆರು ಆಧಾರ ಸ್ಥಂಭಗಳು ಮತ್ತು ಆರಾಧನೆಯ ಐದು ಆಧಾರ ಸ್ಥಂಭಗಳ ಬಗ್ಗೆ ಮಾತ್ರ ವಿವರಿಸುತ್ತಿದ್ದೇವೆ.

# ವಿಶ್ವಾಸದ ಆರು ಆಧಾರಸ್ಥಂಭಗಳು

ಅಲ್ಲಾಹು ಎಂಬುದು ಏಕೈಕ ಸತ್ಯದೇವನ ಹೆಸರು.

## 1. ಅಲ್ಲಾಹನಲ್ಲಿರುವ ವಿಶ್ವಾಸ

'ಅಲ್ಲಾಹು' ಎಂಬುದು ಏಕೈಕ ಸತ್ಯದೇವನಿಗಿರುವ ಅಪ್ಪಟ ಅರಬಿ ಪದವಾಗಿದೆ. ಆರಾಧನೆಗೆ ಅವನು ಮಾತ್ರ ಅರ್ಹ. ಅವನಿಗೆ ಪ್ರತಿಸ್ಪರ್ಧಿಗಳೋ, ಸಮಾನರೋ, ಸಹಭಾಗಿಗಳೋ ಇಲ್ಲ. ಅಲ್ಲಾಹನನ್ನು ಅವನ ಸೃಷ್ಟಿಯೊಂದಿಗೆ ಹೋಲಿಸಲಾಗದು. ಯಾಕೆಂದರೆ ಸೃಷ್ಟಿಕರ್ತ, ಪರಿಪಾಲಕ, ಪರಮ ದಯಾಮಯ, ಪರಮ ಸಾಮರ್ಥ್ಯವುಳ್ಳವ, ಪರಮ ನ್ಯಾಯಪಾಲಕ, ಪರಮ ಚಾಣಾಕ್ಷ, ಸರ್ವಜ್ಞ ಮೊದಲಾದ ಅವನ ದೈವಿಕ ಸತ್ವವನ್ನು ಮತ್ತು ವಿಶೇಷಣಗಳನ್ನು ಅವನು ಯಾರೊಂದಿಗೂ ಹಂಚಿಕೊಂಡಿಲ್ಲ.

ಅಲ್ಲಾಹನಿಗೆ ಅವನ ಅಧಿಕಾರದಲ್ಲಾಗಲಿ, ಕಾರ್ಯನಿರ್ವಹಣೆಯಲ್ಲಾಗಲಿ ಪಾಲುದಾರರಿಲ್ಲ. ಈ ಜಗತ್ತು ಸೃಷ್ಟಿಸಲ್ಪಟ್ಟಿರುವುದು ಅವನ ಅಪ್ಪಣೆಯಿಂದ ಮಾತ್ರವಾಗಿದೆ. ಇದನ್ನು ಪರಿಪಾಲಿಸುವವನು ಮತ್ತು ನಿಯಂತ್ರಿಸುವವನು ಅವನೊಬ್ಬನೇ ಆಗಿದ್ದಾನೆ. ಇಂತಹ ಒಂದು ಸಂಕೀರ್ಣ ಮತ್ತು ಸಂತುಲಿತ ಸೃಷ್ಟಿಯು ಅವನಿಂದಲೇ ಹೊರತು ಅಸಾಧ್ಯ. ಆದ್ದರಿಂದ ಜಗತ್ತು ಸ್ವತಃ ತನ್ನನ್ನು ತಾನೇ ಸೃಷ್ಟಿಸಿಕೊಂಡಿತು, ಅಥವಾ ಆಕಸ್ಮಿಕತೆಯ ಫಲವಾಗಿ ಜಗತ್ತು ಸ್ವಯಂ ಅಸ್ತಿತ್ವಕ್ಕೆ ಬಂತು ಎಂದು ನಂಬುವುದು ಅತಾರ್ಕಿಕವಾಗಿದೆ.

## 2. ಮಲಕ್(angel)ಗಳಲ್ಲಿರುವ ವಿಶ್ವಾಸ

ಅಲ್ಲಾಹು ಮಲಕ್‌ಗಳನ್ನು ಬೆಳಕಿನಿಂದ ಸೃಷ್ಟಿಸಿದನು. ಅವರು ಅವನ ಆಜ್ಞೆಯನ್ನು ಉಲ್ಲಂಘಿಸುವುದಿಲ್ಲ. ದೇವ ಸಂದೇಶಗಳನ್ನು ಪ್ರವಾದಿಗಳಿಗೆ ತಲುಪಿಸಿಕೊಡುವ ಜಿಬ್ರೀಲ್ (Gabriel) ಮತ್ತು ಜನರನ್ನು ಮೃತಪಡಿಸುವ 'ಮರಣದ ಮಲಕ್' ಮೊದಲಾದ ಕೆಲವು ಮಲಕ್‌ಗಳ ವಿವರಣೆಯನ್ನು ಅಲ್ಲಾಹು ತಿಳಿಸಿಕೊಟ್ಟಿರುವನು.

## 3. ಅವತೀರ್ಣಗೊಂಡ ಗ್ರಂಥಗಳಲ್ಲಿರುವ ವಿಶ್ವಾಸ

ಮನುಕುಲಕ್ಕೊಂದು ಮಾರ್ಗದರ್ಶಿಯಾಗಿ ಮತ್ತು ಕಾರುಣ್ಯವಾಗಿ ಅಲ್ಲಾಹು ಪ್ರವಾದಿಗಳಿಗೆ ಗ್ರಂಥಗಳನ್ನು ಅವತೀರ್ಣಗೊಳಿಸಿದನು. ಮೋಶೆ ಮತ್ತು ಯೇಸುವಿಗೆ ಅವತೀರ್ಣಗೊಳಿಸಲಾದ ತೋರಾ ಮತ್ತು ಸುವಾರ್ತೆಗಳು, ಮುಹಮ್ಮದ್(ಸ)ರಿಗೆ ಅವತೀರ್ಣಗೊಂಡ ಕುರ್‌ಆನ್ ಇವುಗಳ ಪೈಕಿ ಕೆಲವು. ಕುರ್‌ಆನಿನ ಹೊರತು ಇತರ ಯಾವುದೇ ಗ್ರಂಥಗಳೂ ಇಂದು ಅವುಗಳ ಮೂಲರೂಪದಲ್ಲಿ ಅಸ್ತಿತ್ವದಲ್ಲಿಲ್ಲ. ಒಂದೋ ಅವು ಪ್ರಕ್ಷಿಪ್ತವಾಗಿವೆ ಅಥವಾ ಕಳೆದುಹೋಗಿವೆ.

> ಕುರ್‌ಆನಿನ ಇನ್ನೊಂದು ವಿಶೇಷತೆಯೇನೆಂದರೆ ಅದು ಸರ್ವ ರೀತಿಯ ವಿರೋಧಾಭಾಸಗಳಿಂದಲೂ, ಪ್ರಮಾದಗಳಿಂದಲೂ ಮುಕ್ತವಾಗಿದೆ

ಕುರ್‌ಆನ್ ದೇವನ ಮಾತುಗಳಾಗಿವೆ. ಅದು ಇಸ್ಲಾಮಿನ ಮೂಲಭೂತ ಆಧಾರ ಗ್ರಂಥವಾಗಿದೆ. ಪ್ರವಾದಿ ಮುಹಮ್ಮದ್(ಸ)ರವರ ಮಾತು ಮತ್ತು ಕೃತಿಗಳನ್ನು ಒಳಗೊಂಡಿರುವ ಸಹೀಹ್ ಹದೀಸ್‌ಗಳು ಇನ್ನೊಂದು ಆಧಾರ ಪ್ರಮಾಣವಾಗಿದೆ.

## 4. ಪ್ರವಾದಿಗಳಲ್ಲಿರುವ ವಿಶ್ವಾಸ

ಅಲ್ಲಾಹು ತನ್ನ ಸಂದೇಶಗಳನ್ನು ಜನರಿಗೆ ತಲುಪಿಸಿಕೊಡುವುದಕ್ಕಾಗಿ ಸಹಸ್ರಾರು ಪ್ರವಾದಿಗಳನ್ನು, ಎಲ್ಲ ಪ್ರದೇಶಗಳಿಗೂ ಕಳುಹಿಸಿದ್ದಾನೆಂದು ಮುಸ್ಲಿಮರು ನಂಬಿಕೆಯಿಡುತ್ತಾರೆ. ಆದಮ್, ನೋಹ, ಅಬ್ರಹಾಮ್, ದಾವೀದ್, ಯೋಸೆಫ್, ಮೋಶೆ, ಯೇಸು ಮತ್ತು ಮುಹಮ್ಮದ್ (ಅವರೆಲ್ಲರ ಮೇಲೂ ಶಾಂತಿಯಿರಲಿ) ಇವರ ಪೈಕಿ ಕೆಲವರು. ಜನರು ಏಕೈಕ ದೇವನನ್ನು ಆರಾಧಿಸುವಂತೆ ಬೋಧಿಸುವುದು, ದೇವನನ್ನು ಹೇಗೆ ಆರಾಧಿಸಬೇಕೆಂಬುದಕ್ಕೆ ಪ್ರಾಯೋಗಿಕ ಮಾದರಿಗಳಾಗುವುದು ಮತ್ತು ಜನರನ್ನು ಮೋಕ್ಷದೆಡೆಗೆ ತಲುಪಿಸುವುದು ಪ್ರವಾದಿಗಳ ದೌತ್ಯವಾಗಿದೆ. ಪ್ರವಾದಿಗಳು ಮನುಷ್ಯರಾಗಿರುವುದರಿಂದ, ಅವರನ್ನು ಆರಾಧಿಸುವುದು ಅಥವಾ ಅವರನ್ನು ಮಧ್ಯವರ್ತಿಯನ್ನಾಗಿ ಮಾಡಿ ಪ್ರಾರ್ಥಿಸುವುದು ನಿಷಿದ್ಧವಾಗಿದೆ. ಪ್ರಾರ್ಥನೆ ಅಥವಾ ಆರಾಧನೆಗಳನ್ನು ಪ್ರವಾದಿಗಳಿಗೆ ಸಲ್ಲಿಸುವುದು, ಅಥವಾ ಅವರ ಮೂಲಕ ದೇವನಿಗೆ ಸಲ್ಲಿಸುವುದು, ಆರಾಧನೆ ಅಲ್ಲಾಹನಿಗೆ ಮಾತ್ರ ಸಲ್ಲತಕ್ಕದ್ದಾಗಿದೆ ಎಂಬ ಅಲ್ಲಾಹನ ಹಕ್ಕಿನ ಉಲ್ಲಂಘನೆಯಾಗಿದೆ.

> ಪ್ರವಾದಿಗಳು ದೇವನ ಯಾವುದೇ ಅಂಶವನ್ನೂ ಹೊಂದಿಲ್ಲ

### – ಪ್ರವಾದಿ ಯೇಸು

ಪ್ರವಾದಿ ಯೇಸು ದೇವನ ಗೌರವಾನ್ವಿತ ಪ್ರವಾದಿಯೂ, ಕನ್ಯಾ ಮೇರಿಯ ಮೂಲಕ ಪವಾಡಸದ್ರಶವಾಗಿ ಜನ್ಮ ತಾಳಿದವರೂ ಆಗಿದ್ದಾರೆಂದು ಮುಸ್ಲಿಮರು ನಂಬುತ್ತಾರೆ. ದೇವನ ಅಪ್ಪಣೆ ಪ್ರಕಾರ ಅವರು ಅನೇಕ ಪವಾಡಗಳನ್ನು ತೋರಿಸಿದ್ದರು. ರೋಗ ಶಮನ, ಅಂಧತ್ವ ನಿವಾರಣೆ, ತಾಯಿಯನ್ನು ವ್ಯಭಿಚಾರೋಪದಿಂದ ರಕ್ಷಿಸುವುದಕ್ಕಾಗಿ ತೊಟ್ಟಿಲಲ್ಲಿ ಮಾತನಾಡಿರುವುದು ಇವುಗಳ ಪೈಕಿ ಕೆಲವು. ಮುಸ್ಲಿಮರು ಯೇಸುವನ್ನು ಗೌರವಿಸುತ್ತಾರೆ ಮತ್ತು ಪ್ರೀತಿಸುತ್ತಾರೆ. ಆದರೆ ಆರಾಧಿಸುವುದಿಲ್ಲ. ಅವರು ದೇವಪುತ್ರರಲ್ಲ, ತ್ರಿಯೇಕತ್ವದ ಅಂಗವಲ್ಲ ಮತ್ತು ದೇವರ ಸಮಗ್ರ ವಿಶೇಷಣಗಳನ್ನು ಹೊಂದಿದವರೂ ಅಲ್ಲ.

> ಅಲ್ಲಾಹು ಹೇಳುತ್ತಾನೆ: "ಪುತ್ರನನ್ನು ಮಾಡಿಕೊಳ್ಳುವುದು ಅಲ್ಲಾಹನಿಗೆ ಯುಕ್ತವಾದುದಲ್ಲ. ಅವನು ಪರಮ ಪಾವನನು! ಅವನು ಯಾವುದೇ ವಿಷಯವನ್ನು ತೀರ್ಮಾನಿಸಿದರೆ ಅದರೊಂದಿಗೆ 'ಉಂಟಾಗು' ಎನ್ನುವನು. ತಕ್ಷಣ ಅದು ಉಂಟಾಗುವುದು!" (ಕುರ್‌ಆನ್ 19:35)

### – ಪ್ರವಾದಿ ಮುಹಮ್ಮದ್(ಸ)

ಮುಹಮ್ಮದ್(ಸ) ಮನುಕುಲಕ್ಕೆ ಕಳುಹಿಸಲಾದ ಕಟ್ಟಕಡೆಯ ಪ್ರವಾದಿ. ಕುರ್‌ಆನಿನ ಬೋಧನೆಗಳನ್ನು ಹೇಗೆ ಅಳವಡಿಸಿಕೊಳ್ಳಬೇಕೆಂದು ಪ್ರಾಯೋಗಿಕವಾಗಿ ಕಲಿಸಿಕೊಡಲು ಮತ್ತು ಪ್ರಾಮಾಣಿಕತೆ, ನ್ಯಾಯ, ಕರುಣೆ, ವಾತ್ಸಲ್ಯ, ಸತ್ಯಸಂಧತೆ, ಸ್ಥೈರ್ಯ ಮೊದಲಾದವುಗಳ ಜೀವಂತ ಮಾದರಿಯಾಗಲು ಅವರನ್ನು ಕಳುಹಿಸಲಾಗಿತ್ತು. ಮುಸ್ಲಿಮರು ಯೇಸುವನ್ನು ಆರಾಧಿಸದಂತೆ ಮುಹಮ್ಮದ್(ಸ)ರನ್ನೂ ಆರಾಧಿಸುವುದಿಲ್ಲ.

ಮುಹಮ್ಮದ್(ಸ)ರವರು ಹೇಳಿದರು:

> "ಕ್ರೈಸ್ತರು ಮೇರಿಯ ಪುತ್ರ ಯೇಸುವನ್ನು ಮಿತಿಮೀರಿ ಹೊಗಳಿದಂತೆ ನೀವು ನನ್ನನ್ನು ಮಿತಿಮೀರಿ ಹೊಗಳಬಾರದು. ನಾನು ದೇವನ ಒಬ್ಬ ದಾಸನು. ಆದ್ದರಿಂದ ನನ್ನನ್ನು ದೇವನ ದಾಸ ಮತ್ತು ಅವನ ಸಂದೇಶವಾಹಕ ಎಂದು ಕರೆಯಿರಿ."

## 5. ನ್ಯಾಯ ತೀರ್ಪಿನ ದಿನದಲ್ಲಿರುವ ವಿಶ್ವಾಸ

ನ್ಯಾಯ ತೀರ್ಪಿನ ದಿನವೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸೃಷ್ಟಿಕರ್ತನ ಮುಂದೆ ನಿಲ್ಲುವ ಮತ್ತು ತನ್ನ ಸತ್ಕರ್ಮ ಹಾಗೂ ದುಷ್ಕರ್ಮಗಳ ಕುರಿತು ಪ್ರಶ್ನಿಸಲಾಗುವ ದಿನ. ಅಂದು ಮನುಷ್ಯರ ಕರ್ಮಗಳನ್ನು, ಅವುಗಳ ಗಾತ್ರವನ್ನು ಪರಿಗಣಿಸದೆ, ಅತ್ಯಂತ ಸ್ಪಷ್ಟವಾಗಿ ತೋರಿಸಲಾಗುವುದು ಮತ್ತು ಮನುಷ್ಯರ ಮಧ್ಯೆ ನ್ಯಾಯಬದ್ಧವಾಗಿ ತೀರ್ಪು ನೀಡಲಾಗುವುದು.

ಆ ನಿರ್ಣಾಯಕ ದಿನದಂದು ಅಲ್ಲಾಹು ಅತ್ಯಂತ ನ್ಯಾಯ ಬದ್ಧವಾಗಿ ವಿಷಯಗಳನ್ನು ತೀರ್ಮಾನಿಸುವನು. ಯಾರಿಗೂ ಅನ್ಯಾಯವಾಗದು. ಪ್ರತಿಯೊಬ್ಬರ ಹಕ್ಕುಗಳನ್ನೂ ಅವರಿಗೆ ಮರಳಿಸಲಾಗುವುದು. ಎಲ್ಲರೊಂದಿಗೆ ನ್ಯಾಯಯುತವಾಗಿ ವರ್ತಿಸಿ, ಸ್ವರ್ಗಕ್ಕೆ ಅರ್ಹರಾಗಿರುವವರನ್ನು ಸ್ವರ್ಗಕ್ಕೂ, ನರಕಕ್ಕೆ ಅರ್ಹರಾಗಿರುವವರನ್ನು ನರಕಕ್ಕೂ ಕಳುಹಿಸಲಾಗುವುದು.

> ನ್ಯಾಯ ತೀರ್ಪಿನ ದಿನ ಇಲ್ಲದೆ ಹೋದರೆ ಜೀವನವು ಸಂಪೂರ್ಣ ಅನ್ಯಾಯಮಯವಾಗಿರುವುದು. ಯಾಕೆಂದರೆ ಇಹಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ನ್ಯಾಯವನ್ನು ಪಡೆಯಲು ಸಾಧ್ಯವಾಗದು

## 6. ದೈವಿಕ ವಿಧಿಯಲ್ಲಿರುವ ವಿಶ್ವಾಸ

ಭೂತ ಮತ್ತು ವರ್ತಮಾನದ ಬಗ್ಗೆ ಹಾಗೂ ಭವಿಷ್ಯದಲ್ಲಿ ಏನು ಸಂಭವಿಸಲಿದೆ ಎಂಬುದರ ಬಗ್ಗೆ ಅಲ್ಲಾಹು ಕರಾರುವಾಕ್ಕಾಗಿ ಅರಿತಿರುವನು. ಸತ್ಯ ಮತ್ತು ಮಿಥ್ಯಗಳನ್ನು ಸ್ವತಃ ಆರಿಸುವ ಸ್ವಾತಂತ್ರ್ಯವನ್ನು ಎಲ್ಲ ಮನುಷ್ಯರಿಗೂ ನೀಡಲಾಗಿದೆ. ಅದರ ಆಧಾರದಲ್ಲೇ ಅವರನ್ನು ವಿಚಾರಣೆ ಮಾಡಲಾಗುವುದು. ಆದರೆ ಬುದ್ಧಿಭ್ರಮಣೆ ಹೊಂದಿದವರು ಸೇರಿದಂತೆ ತಮ್ಮ ಇಚ್ಛೆಯನ್ನು ಸ್ವತಂತ್ರವಾಗಿ ಬಳಸಲು ಸಾಧ್ಯವಾಗದವರು ಇದ-ರಿಂದ ಹೊರತಾಗಿರುವರು.

> ಅಲ್ಲಾಹನಿಗೆ ಎಲ್ಲ ವಿಷಯ ಗಳಲ್ಲೂ ಸಾಮರ್ಥ್ಯವಿದೆ. ಅವನ ಅರಿವು ಮತ್ತು ಅಪ್ಪಣೆಯ ಹೊರತು ಏನೂ ಸಂಭವಿಸದು

ಎಲ್ಲವೂ ದೇವನ ಅರಿವು ಮತ್ತು ಅಪ್ಪಣೆಯೊಂದಿಗೆ ಸಂಭವಿಸುತ್ತದೆ ಎಂಬುದಕ್ಕೆ ಸ್ವತಂತ್ರ ಇಚ್ಛೆಯು ವಿರುದ್ಧವಲ್ಲ. ಅಥವಾ ದೇವನಿಗೆ ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವಿರುವುದರಿಂದ ಅವನು ಮನುಷ್ಯರ ಸ್ವತಂತ್ರ ಇಚ್ಛೆಯನ್ನು ನಿರ್ಬಂಧಿಸುತ್ತಾನೆ ಎಂದೂ ಇದರರ್ಥವಲ್ಲ. ಈ ಜಗತ್ತಿನಲ್ಲಿ ಏನೆಲ್ಲ ಸಂಭವಿಸುತ್ತದೋ, ಅವುಗಳನ್ನು ಸಂಭವಿಸಲು ಅನುಮತಿ ನೀಡುವ ಮೂಲಕ ಅವೆಲ್ಲದರ ಬಗ್ಗೆ ದೇವನು ಸಂತೃಪ್ತನಾಗಿದ್ದಾನೆಂದೂ ಅರ್ಥವಲ್ಲ.